ಕೊಪ್ಪ, ಕೊಪ್ಪದ ಪಾಳ್ಯ, ಮುತ್ಸಂದ್ರ ವಿಠಲಾಪುರಗಳಲ್ಲಿ ಸರಿಯಾದ ರಸ್ತೆಗಳಿಲ್ಲದೆ ಜನರು ಓಡಾಡಲು ತುಂಬಾ ತೊಂದರೆಯಾಗಿರುವುದರಿಂದ, ಸಾರ್ಕರ ಇದಕ್ಕೆ ತಕ್ಷಣ ಸ್ಪಂದಿಸಿ, ಈ ಭಾಗದ ಜನರಿಗೆ ರಸ್ತೆ ಮಾಡಿಸಿ, ಬಸ್ಸುಗಳ ಸೌಕರ್ಯವನ್ನು ಒದಗಿಸಬೇಕು ಎನ್ನು ಅರ್ಜಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ ಮತ್ತು ತುರುವೇಕೆರೆ ತಾಲ್ಲೂಕು ದಂಡಿನಶಿವರ ಹೋಬಳಿಗೆ ಸೇರಿದ ಚಿಕ್ಕಗೊರಘಟ್ಟ ಕುರುಬರಹಳ್ಳಿ, ಚಿಮ್ಮನಹಳ್ಳಿ, ಡಿ. ಶೆಟ್ಟಿಹಳ್ಳಿ, ದೊಂಬರಹಳ್ಳಿ, ಸಿದ್ದನಹಟ್ಟಿ, ದೊಡ್ಡಗೊರಘಟ್ಟ ಈ ಗ್ರಾಮಗಳ ಗ್ರಾಮಸ್ಥರು ಆಸ್ಪತ್ರೆ, ಪಶು ಆಸ್ಪತ್ರೆ, ಸಂತೆಸಾರಿಗೆಗಳಿಗೆ ಹೋಗಲು ಅನುಕೂಲವಾಗುವಂತೆ ಹೇಮಾವತಿ ನದಿಯ ನೀರು ಹರಿಯುತ್ತಿರುವ ಹಳ್ಳಕ್ಕೆ ಒಂದು ಸಂಪರ್ಕ ಸೇತುವೆಯನ್ನು ನಿರ್ಮಾಣ ಮಾಡಿ ಆ ಕಡೆ ಇರತಕ್ಕಂಥ 'ಡಿ' ಕಲ್ಕೆರೆ ಗ್ರಾಮಕ್ಕೆ ಹೋಗಲು ಅನುಕೂಲ ಮಾಡಿಕೊಡುವ ಬಗ್ಗೆ ಸರ್ಕಾರವನ್ನು ಒತ್ತಾಯಿಸುವ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು : ಅರ್ಜಿಗಳನ್ನು ಒಪ್ಪಿಸಲಾಯಿತು.

ಅಧ್ಯಕ್ಷರು : ಈಗ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಂಡು ನಂತರ ನಿಯಮ 69ಅನ್ನು ತೆಗೆದುಕೊಳ್ಳೋಣ. ಶೂನ್ಯ ವೇಳೆಯನ್ನು ತೆಗೆದುಕೊಂಡರೆ ಮಧ್ಯಾಹ್ನ 2 ಗಂಟೆಯವರೆಗೆ ಅದೇ ಆಗುತ್ತದೆ. ಶೂನ್ಯ ವೇಳೆಯನ್ನೇ ತೆಗೆದುಕೊಳ್ಳಬೇಕೆಂದರೆ ಅದಕ್ಕೆ ನನ್ನಧೇನೂ ಅಭ್ಯಂತರವಿಲ್ಲ.

ಶ್ರೀ ಬಿ.ಆರ್. ನೀಲಕಂಠಪ್ಪ : ಮಾನ್ಯ ಅಧ್ಯಕ್ಷರೇ, ಶೂನ್ಯವೇಳೆಯಲ್ಲಿ ನಾನು ಒಂದು ವಿಚಾರವನ್ನು ಪ್ರಸ್ತಾಪ ಮಾಡುವುದಿತ್ತು.

ಅಧ್ಯಕ್ಷರು : ಈಗ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ. ಇವರದು ಮುಗಿಯಲಿ. ಅವರದು ಆದಮೇಲೆ ತಮಗೆ ಅವಕಾಶಕೊಡುತ್ತೇನೆ.

ಶ್ರೀ ಬಿ.ಆರ್. ನೀಲಕಂಠಪ್ಪ : ಅವರು ಪದೇ ಪದೇ ಹೇಳುತ್ತಿರುತ್ತಾರೆ. ಮೊದಲು ನಮಗೆ ಅವಕಾಶ ಕೊಡಿ.

ಅಧ್ಯಕ್ಷರು : ಅವರು ವಿರೋಧ ಪಕ್ಷದ ನಾಯಕರು. ಆದ್ದರಿಂದ, ಇಲ್ಲಿ ಪದೇ ಪದೇ ಎನ್ನುವ ಪ್ರಶ್ನೆ ಬರುವುದಿಲ್ಲ. ಈ ಕಡೆ ಒಬ್ಬರು ಮಾತನಾಡಿ ಆಗಲಿ ಆಮೇಲೆ ತಮಗೆ ಅವಕಾಶವನ್ನು ಕೊಡುತ್ತೇನೆ. ಈಗ ಅಶೋಕ್‌ರವರು, ನಂತರ ನೀಲಕಂಠಪ್ಪನವರು, ನಂತರ ಸಂಪಂಗಿಯವರು, ನಂತರ ಚೆಲುವರಾಯಸ್ವಾಮಿಯವರು.

5. **ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು :**

ಅ. ದೊಡ್ಡ ಬೆಲೆ ಗ್ರಾಮದಲ್ಲಿ ಇಬ್ಬರು ದಲಿತರ ಕೊಲೆಯಿಂದಾಗಿ ಗ್ರಾಮಸ್ಥರು ಭಯಭೀತರಾಗಿರುವ ವಿಚಾರ.

+ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) : ಮಾನ್ಯ ಅಧ್ಯಕ್ಷರೇ, ಕಳೆದ ವಾರ ಇಬ್ಬರ ದಲಿತರ ಕೊಲೆಯಲ್ಲಿ ಪರ್ಯವಸಾನವಾದಂಥ ದೊಡ್ಡಬೆಲೆ ಗ್ರಾಮದಲ್ಲಿರುವಂಥ ಜನ ಭಯಭೀತರಾಗಿರುವುದರ ಬಗ್ಗೆ ಮತ್ತು ಈ ದಲಿತರ ಕೊಲೆಯಾಗಲು ಕಾರಣರಾದಂಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎನ್ನುವುದನ್ನು ನಾನು ಈಗ ಸರ್ಕಾರದ ಗಮನಕ್ಕೆ ತರಲು ಪ್ರಯತ್ನ ಮಾಡುತ್ತೇನೆ. 1992ನೇ ಇಸವಿಯಲ್ಲಿ ಪ್ರಾರಂಭವಾದಂಥ ಘಟನೆ ಇದು. ಕುದಾಯ ಇಲಾಖೆಯ ಅಧಿಕಾರಿ ಮಾಡಿದಂಥ ತಪ್ಪಿನಿಂದ ಈ ಇಬ್ಬರು ದಲಿತರ ಮಾರಣಹೋಮ

ಆಗಿರತಕ್ಕಂಥಾದ್ದನ್ನು ನಾವೆಲ್ಲಾ ಪತ್ರಿಕೆಗಳಲ್ಲಿ ಓದಿದ್ದೇವೆ. ಅದು ನನ್ನ ಕ್ಷೇತ್ರವಾದ ಉತ್ತರಹಳ್ಳಿ ಕ್ಷೇತ್ರದಲ್ಲಿ ಬರತಕ್ಕಂಥ ಒಂದು ಗ್ರಾಮ. ಸರ್ಕಾರದ ತಪ್ಪುಗಳು ಎಲ್ಲೆಲ್ಲಿ ಆಗಿವೆ ಎನ್ನುವುದರ ಬಗ್ಗೆ ತಮ್ಮ ಗಮನವನ್ನು ಸೆಳೆಯಲು ಪ್ರಯತ್ನ ಮಾಡುತ್ತೇನೆ. ಆವತ್ತು ಕೊಲೆಯಾದಂಥ ದಲಿತ ಕುಟುಂಬಕ್ಕೆ ಸೇರಿದ ಕೈಲಾಸ್ ಎನ್ನುವ ವ್ಯಕ್ತಿ ಮೂಲತಃ ಕನಕಪುರ ತಾಲ್ಲೂಕಿನ, ಕೋಡಿಹಳ್ಳಿಯ ಮಳಹಳ್ಳಿ ಗ್ರಾಮದವರು. ಅವರು ಕಳೆದ 10-12 ವರ್ಷಗಳಿಂದ ದೊಡ್ಡಬೆಲೆ ಗ್ರಾಮದಲ್ಲಿ ವಾಸವಾಗಿದ್ದರು. ಸರ್ವೆ ನಂ. 7/5 ರಲ್ಲಿರುವ ಸುಮಾರು 25 ಎಕರೆ ಜಮೀನು ಸರ್ಕಾರಕ್ಕೆ ಸೇರಿದಂಥ ಜಮೀನು 7-10-1993ರಲ್ಲಿ ಈ ಸರ್ಕಾರಿ ಜಮೀನನ್ನು ಅಲ್ಲಿನ ಕಂದಾಯ ಅಧಿಕಾರಿ ಪಹಣಿಯಲ್ಲಿ, ಮ್ಯುಟೇಷನ್‌ನಲ್ಲಿ ಇದು ಖಾಸಗಿ ಜಮೀನು ಅಂದರೆ ನಾರಾಯಣಪ್ಪ ಮತ್ತು ಅವರ ಬಂಧುಗಳ ಜಮೀನು ಎಂದು ದಾಖಲೆ ಮಾಡಿದ ದಿನದಿಂದ ಮೂಲತಃ ಈ ಘಟನೆ ಪ್ರಾರಂಭವಾಯಿತು. ಈ ಘಟನೆ ಪ್ರಾರಂಭವಾದಂದಿನಿಂದ ಅಂದರೆ 1992ನೇ ಇಸವಿಯಿಂದ ಇವತ್ತಿನವರೆಗೆ ಅಲ್ಲಿ ರಿಸರ್ವ್ ಮ್ಯಾನ್ ಇರುವಂಥ ಪರಿಸ್ಥಿತಿ ನಿರ್ಮಾಣವಾಯಿತು. ಕಂದಾಯ ಇಲಾಖೆ ಮಾಡಿದ ಆ ಸಣ್ಣ ತಪ್ಪಿನಿಂದಾಗಿ, ಇದುವರೆಗೆ ಅಲ್ಲಿ ಪೊಲೀಸ್ ಇಲಾಖೆ ಆ ಜಾಗದಲ್ಲಿ ಗಲಾಟೆಯಾಗುವುದನ್ನು ತಡೆಯಲು 50 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದೆ. ಆ ಹಳ್ಳಿಯ ಜನರ ಮೇಲೆ ಪೊಲೀಸಿನವರು ಈ ಒಂದೇ ಕಾರಣಕ್ಕಾಗಿ ಸುಮಾರು 80 ಕೇಸುಗಳನ್ನು ಹಾಕಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ದಲಿತರು ಸುಮಾರು 20 ಬಾರಿ. ಡಿ.ಸಿ. ಆಫೀಸ್ ಮುಂದೆ, ಪೊಲೀಸ್ ಆಫೀಸ್ ಮುಂದೆ ಧರಣಿ ಮಾಡಿದ್ದಾರೆ. ನಮಗೆ ನ್ಯಾಯ ಕೊಡಿ, ಇದು ಸರ್ಕಾರೀ ಜಮೀನು, ಸರ್ಕಾರಕ್ಕೇ ಉಳಿಯಬೇಕು, ಆ ಮೂಲಕ ಬಡವರಿಗೇ ಉಳಿಯಬೇಕು ಎಂದು ಧರಣಿ ಮಾಡಿದ್ದಾರೆ. ಆದರೆ ಸರ್ಕಾರ ಏನೂ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಇದರ ಬಗ್ಗೆ ಕಿಂಚಿತ್ತು ಕಾಳಜಿಯನ್ನೂ ತೋರಿಸಲಿಲ್ಲ. ಮತ್ತೊಂದು ವಿಷಯವನ್ನು ಗಮನಿಸಬೇಕು. ಪೊಲೀಸ್ ಇಲಾಖೆಯಿಂದ ಕಂದಾಯ ಇಲಾಖೆಗೆ 40 ಬಾರಿ ರಿಕ್ವಿಸಿಷನ್ ಹೋಗಿದೆ. ಈ ಗ್ರಾಮದಲ್ಲಿ ಶಾಂತಿ ಪಾಲನೆ ಮಾಡುವುದು ಕಷ್ಟವಾಗುತ್ತಿದೆ, ಅಲ್ಲಿ ಸರ್ಕಾರಿ ಜಮೀನು ಏನಿದೆ ಅದು ಯಾರಿಗೆ ಸೇರುತ್ತದೆ ಎನ್ನುವ ತೀರ್ಮಾನ ಮಾಡಬೇಕೆಂದು 40 ಬಾರಿ ಪೊಲೀಸ್ ಇಲಾಖೆಯಿಂದ ಕಂದಾಯ ಇಲಾಖೆಗೆ ಅರ್ಜಿ ಹೋಗಿದೆ. ಆದರೆ, ಅದರ ಬಗ್ಗೆ ಕಂದಾಯ ಇಲಾಖೆಯವರು ಸ್ವಲ್ಪವೂ ಗಮನಹರಿಸಲಿಲ್ಲ. ಗಮನಹರಿಸಿದರೆ ಅದರ ತೀರ್ಮಾನವಾದರೆ ಇವರಿಗೆ ಹಣ ಬರುವುದಿಲ್ಲ, ಅದಕ್ಕಾಗಿ ಅವರು ಅದನ್ನು ತೀರ್ಮಾನ ಮಾಡಲು ಪ್ರಯತ್ನಿಸಲಿಲ್ಲ. ಈ ಘಟನೆಯಿಂದ ಇವತ್ತು ಅಲ್ಲಿ ಪರಿಸ್ಥಿತಿ ಹದಗೆಟ್ಟಿದೆ. ಇಬ್ಬರು ದಲಿತರು ಮತ್ತು ಬೆಳಗಿನ ಜಾವ 4-5 ಗಂಟೆ ಅವಧಿಯಲ್ಲಿ ಕೈಲಾಸ್ ಎನ್ನುವುದರ ಕೊಲೆಯಾಯಿತು. ಅದರ ಪ್ರತೀಕಾರವಾಗಿ ಬೆಳಿಗ್ಗೆ 7 ಗಂಟೆ ಸಮಯದಲ್ಲಿ ಮತ್ತೊಬ್ಬ ದಲಿತನ ಕೊಲೆಯಾಯಿತು. ನಾರಾಯಣಪ್ಪ ಮತ್ತು ಕೈಲಾಸ್ ಎನ್ನುವವರ ನಡುವೆ ಜಗಳವಾಗಿದ್ದು, ಆದರೆ ಬೋವಿ ಜನಾಂಗಕ್ಕೆ ಸೇರಿದ ಲಕ್ಷ್ಮ ಎನ್ನುವ ಆಮಾಯಕ ಹೆಣ್ಣುಮಗಳ ಹತ್ಯೆಯಾಯಿತು. ಆಗ ಕಾಗೋಡು ತಿಮ್ಮಪ್ಪನವರು ಮಂತ್ರಿಗಳಾಗಿದ್ದರು. ನಂ: 7:5 ಸರ್ಕಾರಿ ಜಮೀನೆಂದು ಘೋಷಣೆಯಾಗಿದೆ, ಅದನ್ನು ಕಾಪಾಡಬೇಕೆಂದು ದಲಿತರು ಮುಖ್ಯಮಂತ್ರಿಗಳ ಮನೆ ಮುಂದೆ ಮೆರವಣಿಗೆ ಮಾಡಿದರು. ಆಗ ಕಾಗೋಡು ತಿಮ್ಮಪ್ಪನವರು ಸ್ಥಳಕ್ಕೆ ಬಂದು ಪರಿಸೀಲಿಸುತ್ತೇನೆ, ಅದು ಸರ್ಕಾರಿ ಜಮೀನಲ್ಲವೆಂದು ಘೋಷಣೆ ಮಾಡಿ ನ್ಯಾಯ ದೊರಕಿಸಿಕೊಡುತ್ತೇನೆಂದು ಆವತ್ತು ಹೇಳಿದರು. ಅದೇ ರೀತಿ, ಕಾಗೋಡು ತಿಮ್ಮಪ್ಪನವರು ಸ್ಥಳಕ್ಕೆ ಭೇಡಿ ನೀಡಿ, ಪರಿಶೀಲಿಸಿ

ಇದು ಸರ್ಕಾರಿ ಜಮೀನು ಎಂದು ಹೇಳಿದರು. ಯಾರು 40-50 ಜನರು ಗುಡಿಸಲು ಹಾಕಿಕೊಂಡಿದ್ದಾರೆ ಅವರಿಗೇ ಅದನ್ನು ರೀಟೈನ್ ಮಾಡಿಸಿಕೊಡುತ್ತೇನೆಂದೂ, ಉಳಿದ ಸರ್ಕಾರಿ ಜಮೀನನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುತ್ತೇವೆಂದೂ ಆವತ್ತು ಹೇಳಿದರು. ಆವತ್ತು ಕಂದಾಯ ಇಲಾಖಾಧಿಕಾರಿಗಳನ್ನು ಕರೆಸಿದ್ದರು. ಅಂದು ಹಾಜರಿದ್ದ ಕಂದಾಯ ಇಲಾಖಾಧಿಕಾರಿಗಳು, ಒಂದು ತಿಂಗಳಲ್ಲಿ ಅದನ್ನು ಇತ್ಯರ್ಥಪಡಿಸುವ ಭರವಸೆ ನೀಡಿದ್ದರು. ಆದರೆ, 2 ವರ್ಷಗಳಾದರೂ ಇದುವರೆಗೂ ಪರಿಹಾರ ಮಾಡಿಕೊಡಲಿಲ್ಲ. ಪೊಲೀಸರ ದೌರ್ಜನ್ಯದಲ್ಲಿ 10 ವರ್ಷಗಳಿಂದ 50 ಲಕ್ಷ ರೂಪಾಯಿಗಳು ಖರ್ಚಾಗಿದೆ ಎಂದರೆ ಅದರ ಬಗ್ಗೆ ಯೋಚಿಸಬೇಕು. 23 ಎಕರೆ ಸರ್ಕಾರಿ ಜಮೀನಿಗೋಸ್ಕರ, ಸರ್ಕಾರ ಹೇಳುತ್ತದೆ, ನಮ್ಮ ಬಳಿ ಹಣವಿಲ್ಲ, ಕ್ರಿಟಿಕಲ್ ಪೊಜಿಷನ್ ಇದೆ, ನಾವು ಬಹಳ ಕಷ್ಟದಿಂದ ಸರ್ಕಾರ ನಡೆಸುತ್ತಿದ್ದೇವೆ ಎಂಬ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಆದರೆ, 23 ಎಕರೆ ಸರ್ಕಾರ ಜಮೀನಿಗೋಸ್ಕರ ಪೊಲೀಸ್ ಇಲಾಖೆಗೆ 50 ಲಕ್ಷ ರೂಪಾಯಿ ಕೊಟ್ಟಿದ್ದರು. ಕಂದಾಯ ಇಲಾಖೆಯವರು, ಇದು ಸರ್ಕಾರಿ ಜಮೀನೆಂದು ಫೆನ್ಸಿಂಗ್ ಮಾಡಿಟ್ಟಿದ್ದರೆ, ಆಗುತ್ತಿತ್ತು. ದುರ್ದೈವ, ನಾನು ಇದೇ ಸದನದಲ್ಲಿ 15ನೇ ತಾರೀಖು, ದೊಡ್ಡಬೆಲೆ ಗ್ರಾಮಕ್ಕೆ ಸೇರಿದ 23 ಎಕರೆ ಜಮೀನು ಯಾರದ್ದೆಂದು ಕಂದಾಯ ಮಂತ್ರಿಗಳಿಗೆ ಪ್ರಶ್ನೆ ಕೇಳಿದ್ದಕ್ಕೆ, ಅವರು, ಇದು ಸರ್ಕಾರಿ ಜಮೀನೆಂದು ತಿಳಿಸಿದ್ದರು.

ಶ್ರೀ ಕಾಗೋಡು ತಿಮ್ಮಪ್ಪನ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವಾರ್ತಾ ಸಚಿವರು) : ನಾನು ಅಲ್ಲಿಗೆ ಹೋದ ಸಂದರ್ಭದಲ್ಲಿ, ಜಿಲ್ಲಾಧಿಕಾರಿಗಳ ಅಥವಾ ಎಸಿ ಮುಂದೆ ಆ ಪ್ರಶ್ನೆ ಇತ್ತು. ತದನಂತರದಲ್ಲಿ, ತೀರ್ಮಾನವಾಗಿದೆ ಎಂದು ಹೇಳಿ ಯಾರು ಅರ್ಹರಿದ್ದಾರೆ ಅವರಿಗೆ ನಿವೇಶನ ಹಂಚುತ್ತೇವೆಂದು ಹೇಳಿದ್ದರು. ತದನಂತರ, ನಾನು ನಮ್ಮ ಕಛೇರಿಗೆ ಕರೆಸಿ ಚರ್ಚಿಸಿದ್ದೇನೆ. ನಂತರ, ಈಗ ಅದು ತೀರ್ಮಾನವಾಗಿದೆ ಎಂಬ ವರದಿ ನನಗೆ ಕೊಟ್ಟ ನೆನಪಿದೆ. ಅಲ್ಲಿ ಎರಡು ತರಹ ಸಮಸ್ಯೆ ಇತ್ತು, ಕೆಲವರು ಹೋಗಿ ಗುಡಿಸಲು ಹಾಕಿರುವುದು ಮತ್ತು ಕೆಲವರು ಮೊದಲಿನಿಂದ ಇದ್ದವರೂ ಇದ್ದರು. ಯಾರು ಮೊದಲಿನಿಂದ ಅಲ್ಲಿದ್ದಾರೆ, ಯಾರು ನಿವೇಶನರಹಿತರಿದ್ದಾರೆ, ಅಂಥವರಿಗೆ ನಿವೇಶನವನ್ನು ವಿತರಣೆ ಮಾಡುತ್ತೇವೆಂಬ ಮಾತನ್ನು ಕಛೇರಿಯಲ್ಲಿ ಚರ್ಚೆ ಮಾಡಿದ ಸಂದರ್ಭದಲ್ಲಿ ಹೇಳಿದ್ದೆ. ನೀವು, ಅದು ತೀರ್ಮಾನವಾಗಿಲ್ಲವೆನ್ನುತ್ತಿದ್ದೀರಿ. ಆವತ್ತು ಅಲ್ಲಿ ಕೊಟ್ಟ ವರದಿ ಪ್ರಕಾರ, ತೀರ್ಮಾನವಾಗಿತ್ತು ಎಂದು ತಿಳಿದು ಬಂದಿದೆ.

ಶ್ರೀ ಆರ್. ಅಶೋಕ್ : ಮಂತ್ರಿಗಳು ಸರಿಯಾದ ಮಾತನ್ನು ಹೇಳಿದ್ದಾರೆ. ಆವತ್ತು ತೀರ್ಮಾನವಾಯಿತು. ಅಂದು ಉಪಸ್ಥಿತರಿದ್ದ ಕಂದಾಯಾಧಿಕಾರಿಗಳು ಒಂದು ತಿಂಗಳೊಳಗೆ, ಯಾರು ಅಕ್ರಮ, ಸಕ್ರಮದಲ್ಲಿ ಹೋಗಿದ್ದಾರೆ, ಅವರ ಅರ್ಜಿ ತೆಗೆದುಕೊಂಡು ಕೊಡಲು ಪ್ರಯತ್ನಿಸುತ್ತೇವೆಂದು ಹೇಳಿದ್ದರು. ಅವರು ಆವತ್ತೇ ಅದನ್ನು ಕೊಟ್ಟಿದ್ದರೆ, ದಲಿತರ ಕೊಲೆಯಾಗುತ್ತಿರಲಿಲ್ಲ. 1992ನೇ ಇಸವಿಯಿಂದ ಇದೇ ಪ್ರಶ್ನೆಯನ್ನು ಸದನದಲ್ಲಿ ಹತ್ತಾರು ಬಾರಿ ಕೇಳಲಾಗಿದೆ. ನಾನು ಕಂದಾಯ ಮಂತ್ರಿಗಳನ್ನು 5ನೇ ತಾರೀಖು ಕೇಳಿದೆ ಇಲ್ಲಿ ಲಾ ಅಂಡ್ ಆರ್ಡರ್ ಸಮಸ್ಯೆಯಾಗಿದೆ, ಜನರು ಸಾಯುತ್ತಾರೆಂಬ ಮಾತನ್ನು ನಾನು ಒಂದು ವಾರದ ಹಿಂದೆ ಹೇಳಿದ್ದೆ. ಆವತ್ತೇ ಸರ್ಕಾರ ಅದರ ಬಗ್ಗೆ ಗಮನಹರಿಸಿದ್ದರೆ, ಆ ದಲಿತರ ಕೊಲೆಯಾಗುತ್ತಿರಲಿಲ್ಲ ಇದು ನೋವಿನ ಸಂಗತಿ ಆವತ್ತು ಕಂದಾಯ ಮಂತ್ರಿಗಳು ಅವರ

ಪದಗಳಲ್ಲಿಯೇ ಹೇಳಬೇಕಾದರೆ, ಯಾರ್ರೀ ಸರ್ಕಾರಿ ಜಮೀನನ್ನು ಕೊಂಡುಕೊಳ್ಳುತ್ತಾರೆ? ಅವರು ಉದ್ಧಾರವಾಗುತ್ತಾರೆಯೇ? ಅವರನ್ನು ಮಟ್ಟ ಹಾಕುತ್ತೇವೆಂಬ ಮಾತನ್ನು ಹೇಳಿದ್ದರು. ಇವತ್ತು ಕಂದಾಯ ಮಂತ್ರಿಗಳನ್ನು ನಾನು ಕೇಳುವುದೇನೆಂದರೆ, ನಿಮ್ಮ ಕಂದಾಯಾಧಿಕಾರಿಗಳು ಅವರಿಗೆ ಖಾತೆ ಮಾಡಿಕೊಟ್ಟರು, ಮ್ಯುಟೇಷನ್, ಪಹಣಿಯಲ್ಲಿ ಎಂಟ್ರಿ ಮಾಡಿದರು. ಅದಕ್ಕೋಸ್ಕರ ಪ್ರೈವೇಟ್ ಪಾರ್ಟಿ ಕೋರ್ಟಿಗೆ ಹೋಗಿ ಸ್ಟೇ ತಂದು, 10 ವರ್ಷಗಳ ಕಾಲದ ರಾದ್ಧಾಂತಕ್ಕೆ ಕಾರಣರಾದರು. ಅರರ ಮೇಲೇನು ಕ್ರಮ ತೆಗೆದುಕೊಳ್ಳುತ್ತೀರಿ? ಮೂಲತಃ ಒಂದೇ ಒಂದು ಪಹಣಿ ಮ್ಯೂಟೇಷನ್ ಎಂಟ್ರಿ ಆಗಿದ್ದರಿಂದ ಇಷ್ಟೆಲ್ಲಾ ಮಾರಣಹೋಮಕ್ಕೆ ಕಾರಣವಾಯಿತು. ಇವರ ಮೇಲೇನು ಕ್ರಮ ತೆಗೆದುಕೊಳ್ಳಬೇಕೆಂದು ನಾನು ಆಗ್ರಹಪಡಿಸುತ್ತಿದ್ದೇನೆ. ಪೊಲೀಸ್ ಇಲಾಖೆಗಿಂತ ಇದಕ್ಕೆಲ್ಲಾ ರೆವಿನ್ಯೂ ಇಲಾಖೆಯವರೇ ಕಾರಣಕರ್ತರು. 10 ವರ್ಷಗಳಲ್ಲಿ ಆ ಜಮೀನಿಗೆ ಸಂಬಂಧಪಟ್ಟಂಥ ಖಾತೆಯನ್ನು ಸರಿಪಡಿಸಿದ್ದರೆ, ಸರ್ಕಾರಿ ಜಮೀನೆಂದು 23 ಎಕರೆ ಏನು ಹೇಳುತ್ತೀರಿ ಅದಕ್ಕೆ ಬಂದೋಬಸ್ತ್ ಫಿಕ್ಸ್ ಮಾಡಿದ್ದರೆ, ಇವತ್ತು ಆ ದಲಿತರ ಕಗ್ಗೊಲೆ ಆಗುತ್ತಿರಲಿಲ್ಲ. ಪೊಲೀಸರು ತಮಗೆ ವರದಿ ಕಳುಹಿಸಿದ್ದು, ಅದರ ವರದಿ ನನ್ನ ಹತ್ತಿರವಿದೆ ಅದರಲ್ಲಿ ಅವರು, ನಾವು ಹತ್ತಾರು ಬಾರಿ ನಿಮಗೆ ಮನವಿ ಮಾಡಿದರೂ, ನೀವು ಸರಿಯಾದ ಕ್ರಮ ಕೈಗೊಳ್ಳುತ್ತಿಲ್ಲ, ಸ್ಥಳಕ್ಕೆ ಬಂದು ಅದರ ಬಗ್ಗೆ ರಿಸೀವರ್ ನೇಮಿಸಿ, ಆತ ಅಲ್ಲೇ ಇದ್ದು, ಜಮೀನಿನ ರಕ್ಷಣೆ ಮಾಡಿ, ಮುಂದೆ ಯಾರೂ ಅಲ್ಲಿ ಗುಡಿಸಲು ಹಾಕಬಾರದು, ಅದನ್ನು ಸರ್ಕಾರ್ಕಕೇ ಉಳಿಸುವ ಕೆಲಸ ಮಾಡಲು ರಿಸೀವರ್ ನೇಮಿಸಿ ಎಂಬ ವರದಿ ಕೊಟ್ಟರು. ಆದರೆ, 10 ವರ್ಷಗಳ ನಂತರ ತಾವು ರಿಸೀವರ್‌ರನ್ನು ನೇಮಿಸಿದಿರಿ. ಆ ರಿಸೀವರ್ ಎನ್ನುವ ವ್ಯಕ್ತಿ ಇದುವರೆಗೆ ಸ್ಥಳಕ್ಕೆ ಭೇಟಿ ನೀಡಿಲ್ಲ. ಆದರೆ, ತಿಮ್ಮಪ್ಪನವರು ಸ್ಥಳಕ್ಕೆ ಬಂದು ಹೋದರು. ತಹಸೀಲ್ದಾರ್ ಗ್ರೇಡ್‌ಗಿಂತ ಕೆಳಗಿರುವ ಶಿರಸ್ತೇದಾರ್ ಸ್ಥಳಕ್ಕೆ ಬಂದು ಹೋಗಲಿಲ್ಲ. ಅದರಿಂದಾಗಿ ಈ ಘಟನೆ ನಡೆದಿದೆ. ಅದಕ್ಕೆ ದಾಖಲೆಗಳಿವೆ. ಹಿಂದೆ ಹೈಕೋರ್ಟಿನಲ್ಲಿ ಇದರ ಬಗ್ಗೆ ಕೇಸ್ ಹಾಕಿದಾಗ, ಹೈಕೋರ್ಟಿನವರು ಒಂದು ಜಡ್ಜ್‌ಮೆಂಟ್ ಕೊಟ್ಟು, ಅದು ಸರ್ಕಾರಿ ಜಮೀನಾಗಿದ್ದರೆ, ಕೂಡಲೇ ಅಲ್ಲಿರುವ ನಾರಾಯಣಪ್ಪ ಮತ್ತು ಅವರ ಸಂಬಂಧಿಗಳನ್ನು ತೆರವು ಮಾಡಿಸಿ ಎಂದು ಹೇಳಿದ್ದಾರೆ. ಅವತ್ತೇ ಅವರನ್ನು ತೆರವು ಮಾಡಿಸಿದ್ದರೆ, ಈ ಕೊಲೆಗಳಾಗುತ್ತಿರಲಿಲ್ಲ. ರೆವಿನ್ಯೂ ಇಲಾಖೆಯವರು ಸುಮ್ಮನೆ ಬಿಟ್ಟರು. ಏಕೆಂದರೆ, ಅದರಿಂದೇನೂ ಉಪಯೋಗವಾಗುವುದಿಲ್ಲ, ಏನೂ ಆದಾಯ ಬರುವುದಿಲ್ಲ. ಅವನು ಮತ್ತೆ ಕೋರ್ಟಿಗೆ ಹೋಗುವವರೆಗೂ, 6 ತಿಂಗಳು ಕಳೆದ ನಂತರ, ಸ್ಟೇ ತಂದಮೇಲೆ ರೆವಿನ್ಯೂ ಅಧಿಕಾರಿಗಳು ಕೇಸ್ ಇದೆ. ಏನೂ ಮಾಡುವುದಕ್ಕಾಗುವುದಿಲ್ಲವೆಂದರು. ಇದರಲ್ಲಿ ಹೊಂದಾಣಿಕೆ ಇಲ್ಲ. ಪೊಲೀಸ್ ಇಲಾಖೆ - ರೆವಿನ್ಯೂ ಇಲಾಖೆಯವರು ಒಬ್ಬರ ಮೇಲೊಬ್ಬರು ಆಪಾದಿಸುತ್ತಿದ್ದಾರೆ. ನಿನ್ನೆ ಮುಖ್ಯಮಂತ್ರಿಗಳು, ನಾವೆಲ್ಲಾ ಹೊಂದಾಣಿಕೆ ಮಾಡಿಕೊಳ್ಳುವುದರಿಂದ, ಗ್ರಾಫಿಕ್ ಮೇಲೆ ಹೋಗುತ್ತಿದೆ ಎಂದರು. ಅಂದರೆ, ಕೊಲೆಗಳಲ್ಲಿ ಗ್ರಾಫಿಕ್ ಮೇಲೆ ಹೋಗುತ್ತಿದೆ. ಪೊಲೀಸ್ - ರೆವಿನ್ಯೂ ಇಲಾಖೆಯವರಲ್ಲಿ ಹೊಂದಾಣಿಕೆ ಇದ್ದಿದ್ದರೆ, ಈ ಕೊಲೆಗಳಾಗುತ್ತಿರಲಿಲ್ಲ. ಇದಕ್ಕೆ ಪೂರ್ತಿ ಸರ್ಕಾರವೇ ಜವಾಬ್ದಾರಿಯಾಗುತ್ತದೆ. ಏಕೆಂದರೆ, ದಾಖಲೆ ತಿದ್ದಿದ ನಿದರ್ಶನವನ್ನು ನಾನು ತಮ್ಮ ಮುಂದಿಟ್ಟಿದ್ದೇನೆ. ಇದರಲ್ಲಿ ತಪ್ಪಿತಸ್ಥರ್ಯಾರಿದ್ದಾರೆ ಅವರು ರೆವಿನ್ಯೂ ಅಥವಾ ಪೊಲೀಸ್ ಇಲಾಖೆಯವರಿರಬಹುದು, ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಬೋವಿ ಜನಾಂಗಕ್ಕೆ

ಇಲಾಖೆಯವರಿರಬಹುದು, ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಬೋವಿ ಜನಾಂಗಕ್ಕೆ ಸೇರಿದ ಲಕ್ಷ್ಮ ಮ್ಮ ಎನ್ನುವ ಮಹಿಳೆ ಸತ್ತಿದ್ದಾರೆ. ಬೇರೆ ಬೇರೆ ಜನಾಂಗದವರ ಮಧ್ಯ ಜಗಳವಾಗಿದೆ. ಸತ್ತಿದ್ದು ಇಬ್ಬರು ದಲಿತರು. ಇದರ ಹಿಂದೆ ಅಡಗಿರುವ ಕೈವಾಡ ಯಾರದ್ದು? ಇದರ ಹಿಂದೆ ಯಾರ್ಯಾರ ಇನ್‌ವಾಲ್ವ್‌ಮೆಂಟ್ ಇದೆ? ಇದರ ಬಗ್ಗೆ ತನಿಖೆಯಾಗಬೇಕು. ಕಳೆದ 10 ವರ್ಷಗಳಿಂದ ನಡೆದಿರುವ ಮಾರಣಹೋಮವಿದು. ಸರ್ಕಾರ ಮತ್ತು ಪೊಲೀಸ್ ಇಲಾಖೆ ಎರಡಕ್ಕೂ ಕಠಿಣವಾಗಿ ನಿಂತಿರುವ ಈ ಘಟನೆ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕು. ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು. ಲಕ್ಷ್ಮ ಮ್ಮ ಎನ್ನುವವರಿಗೆ ಪರಿಹಾರ ಕೊಡಬೇಕು.

1.30 ಪಿ.ಎಂ.

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಮಾನ್ಯ ಅಧ್ಯಕ್ಷರೇ, ಈ ವಿಚಾರ ಕೇವಲ ಶೂನ್ಯವೇಳೆಯಲ್ಲಿ ತೆಗೆದುಕೊಂಡು ಸುಮ್ಮನೆ ಅವರ ಗಮನಕ್ಕೆ ತರುವ ವಿಚಾರವಿಲ್ಲ. ಇದು ಬಹಳ ತೀಕ್ಷ್ಣವಾದ ವಿಚಾರ ಇದರ ಬಗ್ಗೆ ಸಂಪೂರ್ಣವಾಗಿ ಚರ್ಚೆಯಾಗಬೇಕೆಂಬುದು ನನ್ನ ಆಸೆ. ನಾಳೆ ಇಡೀ ದಲಿತ ಸಮೂಹ ಒಂದು ರ್ಯಾಲಿ ತೆಗೆದುಕೊಂಡು ಸರ್ಕಾರವನ್ನೇ ಇಕ್ಕಟ್ಟಿಗೆ ಸಿಕ್ಕಿಸತಕ್ಕ ಪರಿಸ್ಥಿತಿ ಬಂದಿದೆ. ಕೇವಲ ವಿಚಾರಣೆ ಮಾಡುತ್ತೇವೆಂದು ಉತ್ತರಿಸಿದರೆ ಆಗುವುದಿಲ್ಲ. ಇದಕ್ಕೆ ಪ್ರತ್ಯೇಕವಾಗಿ ಕಾಲಿಂಗ್ ಅಟೆನ್‌ಶನ್ ರೂಪದಲ್ಲಿ ಅಥವಾ ಬೇರೆ ಯಾವುದಾದರೊಂದು ರೂಪದಲ್ಲಿ ಅವಕಾಶ ಕೊಡಬೇಕು. ಕಂದಾಯ ಮತ್ತು ಪೊಲೀಸ್ ಇಲಾಖೆಗಳು ಯಾವ ರೀತಿ ವಿಫಲವಾಗಿವೆ? ಸರ್ಕಾರ ಯಾವ ದಿಕ್ಕಿನಲ್ಲಿ ಹೊಗಿದೆ ಎಂಬ ಬಗ್ಗೆ ಚರ್ಚೆಯಾಗಬೇಕು. ಆದುದರಿಂದ, ಇದರ ಬಗ್ಗೆ ಪ್ರಸ್ತಾಪಿಸಲು ಪ್ರತ್ಯೇಕವಾಗಿ ಅವಕಾಶ ಕೊಡಬೇಕು. ಅದಕ್ಕೆ ಉತ್ತರವನ್ನೂ ಕೊಡಬೇಕಾಗುತ್ತದೆ.

ಶ್ರೀ ಪಿ.ಜಿ. ಆರ್.ಸಿಂಧ್ಯ (ಕನಕಪುರ) : ಇದು ನಮ್ಮ ಜಿಲ್ಲೆಗೆ ಸಂಬಂಧಿಸಿದ ವಿಚಾರ ಒಂದು ಕಡೆಯಾದರೆ, ಮತ್ತೊಂದು ಕಡೆ ಬಹಳ ಪ್ರಮುಖವಾಗಿ ಈ ಸರ್ಕಾರ ಬಂದ ಮೇಲೆ, ರೈತರ ರಕ್ಷಣೆ ಎಷ್ಟರಮಟ್ಟಿಗೆ ಆಗುತ್ತಿದೆ ಎನ್ನುವುದನ್ನು ನಾವೆಲ್ಲರೂ ಯೋಚಿಸಬೇಕಾದ ವಿಚಾರ ತಮಗೆ ಗೊತ್ತಿರುವ ಹಾಗೆ, ಎಷ್ಟರಮಟ್ಟಿಗೆ ಈ ಸರ್ಕಾರದಲ್ಲಿ ದಲಿತರಿಗೆ ರಕ್ಷಣೆ ಸಿಗುತ್ತಿದೆ ಎನ್ನುವುದನ್ನು ನಾವು ಪ್ರತಿನಿತ್ಯ ಪತ್ರಿಕೆಗಳಲ್ಲಿ ಓದುತ್ತಿದ್ದೇವೆ ನಿಜ ಆಗ ಸಮಾಜ ಕಲ್ಯಾಣ ಸಚಿವರಾಗಿದ್ದ ಮಾನ್ಯ ಕಾಗೋಡು ತಿಮ್ಮಪ್ಪನವರು ಆ ಸ್ಥಳಕ್ಕೆ ಹೋಗಿದ್ದು ನಿಜ. ಅವರು ಸ್ವಲ್ಪಮಟ್ಟಿಗೆ ಕ್ರಮ ತೆಗೆದುಕೊಳ್ಳಬೇಕೆಂದು ಯೋಚಿಸಿದ್ದೂ ನಿಜ. ಆದರೆ, ಮಸ್ತು ಸ್ಥಿತಿಯಲ್ಲಿ ನಾವೆಲ್ಲರೂ ನಿಷ್ಪಕ್ಷಪಾತವಾಗಿ ಯೋಚಿಸಿದರೆ, ಕಂದಾಯ ಮತ್ತು ಪೊಲೀಸ್ ಇಲಾಖೆಗಳಿಗೆ ಸರಿಯಾದ ಕೋ-ಆರ್ಡಿನೇಷನ್ ಇದ್ದಿದ್ದರೆ, ಏನು ಇಬ್ಬರ ಕೊಲೆಯಾಗಿದೆ ಅದನ್ನ ಎತಪ್ಪಿಸಬಹುದಾಗಿತ್ತು. ಇದರ ಬಗ್ಗೆ ನಾವು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದೇವೆ. ಇದಕ್ಕೆ ನಾಳೆ ಸಚಿವರು ಉತ್ತರಿಸುತ್ತಾರೆಂದರೆ ಆಗುವುದಿಲ್ಲ. ಇದರ ಬಗ್ಗೆ ಬಹಳ ದೀರ್ಘವಾಗಿ ಯೋಚನೆ ಮಾಡಬೇಕಾಗುತ್ತದೆ. ತಾವು ನಾಳೆ ಒಂದು ಸಮಯ ನಿಗದಿ ಮಾಡಿ ಮಾನ್ಯ ಗೃಹ ಸಚಿವರ ಜೊತೆಯಲ್ಲಿ ಅಥವಾ ಸಂಸದೀಯ ವ್ಯವಹಾರಗಳ ಸಚಿವರ ಜೊತೆಯಲ್ಲಿ ಚರ್ಚಿಸಿ, ಯಾವುದಾದರೊಂದು ರೂಪದಲ್ಲಿ ಇದರ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಏಕೆಂದರೆ, ಇದಕ್ಕಿಂತ ಮಹತ್ವದ ಪ್ರಶ್ನೆ ಮತ್ತೊಂದಿಲ್ಲ. ಸಾಯಂಕಾಲ ಕೊಲೆಯಾಗುತ್ತದೆ. ಅಪೋಜಿಟ್ ಯಾರೆಂಬುದು ಗೊತ್ತಿದೆ. ಆ ಹೆಣ್ಣುಮಗಳ ಮೇಲೆ ಕಣ್ಣಿದೆ ಎಂಬುದು ಗೊತ್ತಿದೆ. ಗೊತ್ತಿದ್ದರೂ ಅವರಿಗೆ ಏಕೆ ರಕ್ಷಣೆ ಕೊಡಲಿಲ್ಲವೆಂಬ ಪ್ರಶ್ನೆ ಬರುತ್ತದೆ. ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ, ಲಾ ಅಂಡ್ ಆರ್ಡರ್ ಮೇನ್‌ಟೇನ್ ಮಾಡಬೇಕಾದರೆ,

ಧರ್ಮಸಿಂಗ್‌ರವರು ಮಂತ್ರಿಗಳಾಗಿದ್ದರು ಈ ರೀತಿ ತಮ್ಮ ಕಾಲದಲ್ಲಿ ಏಕೆ ಆಗಿರಲಿಲ್ಲ? ನನ್ನ ಕಾಲದಲ್ಲಿ ಏಕೆ ಆಗಲಿಲ್ಲ? ಏಕೆಂದರೆ, ಪ್ರಿವೆನ್‌ಟೀವ್ ಆಕ್ಷನ್ ಅನ್ನು ತಾವು ತೆಗೆದುಕೊಳ್ಳಬೇಕಾಗುತ್ತದೆ. ಫೈರಿಂಗ್ ಾಯಿತು, ನ್ಯಾಯಾಂಗ ತನಿಖೆಯೂ ಆಯಿತು. ಇನ್ನೆಲ್ಲೋ ಪೊಲೀಸರು ನೇಣು ಹಾಕಿಕೊಂಡು ಸತ್ತರು. ಅದಕ್ಕೆ ತನಿಖೆಯಾಯಿತು. ನಿಮಗೆ ಗೊತ್ತಿಲ್ಲವೆಂದರೆ ನಾನು ಒಪ್ಪಿತ್ತೇನೆ. ನಿಮಗೆ ಗೊತ್ತಿದ್ದರೂ ಸಹ 12 ಗಂಟೆಯೊಳಗೆ ಇನ್ನೊಂದು ಗುಂಪಿನ ಕೊಲೆಯಾಗುತ್ತದೆಂದರೆ ತಿಳಿದಮೇಲೆ, ಸರ್ಕಾರ ಅವರನ್ನು ಕರೆದು ಮಾತನಾಡಿಲ್ಲ, ಅಲ್ಲಿಗೆ ಜಿಲ್ಲಾಧಿಕಾರಿಗಳು ಹೋಗಿಲ್ಲವೆಂದರೆ ಇದು ಸರ್ಕಾರದ ಸಾಫಲ್ಯತೆಯೇ? ಇದರ ಬಗ್ಗೆ ತಿಳಿಸಬೇಕಾಗುತ್ತದೆ. ನಾಳೆ ಇಲ್ಲಿ ಗೃಹ ಸಚಿವರೂ ಇರಬೇಕಾಗುತ್ತದೆ. ನಾವು ಅವರ ಎದುರಿನಲ್ಲಿ ಮಾತನಾಡಬೇಕಾಗುತ್ತದೆ. ಮುಖ್ಯಮಂತ್ರಿಗಳು ಇವತ್ತಿನಿಂದ 2-3 ದಿವಸ ಇರುವುದಿಲ್ಲವೆಂದು ನಾನು ಕೇಳಿದ್ದೇನೆ. ಮುಖ್ಯಮಂತ್ರಿಗಳು ಇದ್ದಿದ್ದರೆ ಚೆನ್ನಾಗಿರುವುದು.

ಅಧ್ಯಕ್ಷರು : ಅವರು ಇವತ್ತು ಬರುವುದಿಲ್ಲವೆಂದು ಪತ್ರ ಬರೆದಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅದು ಗೊತ್ತಿಲ್ಲ. ಅದರ ಬಗ್ಗೆ ತಾವು ಹೇಳಬೇಕು. ಇದರ ಬಗ್ಗೆ ತಾವು ಸದನಕ್ಕೆ ತಿಳಿಸುವ ಕೆಲಸ ಮಾಡಬೇಕು. ಇಬ್ಬರು ರಾಜೀನಾಮೆ ಕೊಟ್ಟಿದ್ದಾರೆಂದು ಹೇಳಿದರು. ಅದರ ಕಥೆ ಏನಾಯಿತು? ಇನ್ಯಾರೋ ರಕ್ಷಣೆ ಕೇಳಿದ್ದರು. ಅದರ ಕಥೆ ಏನಾಯಿತು? ಇದರ ಬಗ್ಗೆ ಸಭಾಧ್ಯಕ್ಷರು ತಿಳಿಸುವುದು ತಮ್ಮ ಕೆಲಸ, ತಾವು ಅದನ್ನು ಮಾಡುತ್ತಿದ್ದೀರಿ. ಆದರೆ, ಅದನ್ನು ನಮಗೆಲ್ಲಾ ಸಮರ್ಪಕವಾಗಿ ತಿಳಿಸಬೇಕು. ನಮಗೆಲ್ಲಾ ಎಂದರೆ ನನಗಲ್ಲ, ಇಡೀ ರಾಜ್ಯದ ಜನತೆಗೆ ತಿಳಿಸಬೇಕಾಗುತ್ತದೆ. ಈ ವಿಚಾರದಲ್ಲಿ ಸಂಸದೀಯ ವ್ಯವಹಾರಗಳ ಸಚಿವರ ತಕರಾರು ಇರುವುದಿಲ್ಲ. ಅದಕ್ಕೆ ನಾಳೆ 2 ಗಂಟೆ ಸಮಯ ಅವಕಾಶ ಕೊಡಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ವಿಷಯದ ಮೇಲೆ ಚರ್ಚಿಸಲು ನನ್ನ ತಕರಾರಿಲ್ಲ. ಆದರೆ, ಎಲ್ಲ ಚರ್ಚಿಸಿ, ಆಮೇಲೆ ಮತ್ತೊಮ್ಮೆ ಸಮಯ ಕೊಡಿ ಎನ್ನುತ್ತೀರಿ, ಅದಕ್ಕೆ ನನ್ನ ತಕರಾರಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಶೋಕ್‌ರವರು ಕೆಲವು ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ನಾನು ಕೆಲವು ಕಡತಗಳನ್ನು ತಂದಿದ್ದೇನೆ. ಮಾನ್ಯ ಚಂದ್ರೇಗೌಡರು ವಿರೋಧ ಪಕ್ಷದ ನಾಯಕರಾಗಿದ್ದವರು, ಅವರ ಬಗ್ಗೆ ನಮಗೆ ಗೌರವವಿದೆ. ಮಾನ್ಯ ರೋಷನ್ ಬೇಗ್ ಗೃಹ ಸಚಿವರಾಗಿದ್ದರು, ನಮ್ಮ ಸರ್ಕಾರದಲ್ಲಿ ನಾನೂ ಗೃಹ ಸಚಿವನಾಗಿದ್ದೆ. ಆ ಸಂದರ್ಭದಲ್ಲಿ ಏನೇನು ಮಾಡಿದ್ದೇವೆ ಎಂಬ ಮಾಹಿತಿಯನ್ನು ನಾನಿಲ್ಲಿ ತಂದಿದ್ದೇನೆ. ಇದನ್ನು ಮುಖ್ಯಮಂತ್ರಿಗಳಿಗೆ ಮತ್ತು ಗೃಹ ಸಚಿವರಿಗೆ ಸಲ್ಲಿಸಬೇಕಲ್ಲವೇ? ಬಡ್ಜೆಟ್ ಪಾಸ್ ಆಗಿಯೇ ಆಗುತ್ತದೆ, ನಾವು ವಾಕ್‌ಔಟ್ ಮಾಡಿದರೂ, ಅಪ್ರೋಪ್ರಿಯೇಷನ್ ಬಿಲ್ ಡಿಸ್ಕಷನ್ ಇಲ್ಲದೆ ಪಾಸ್ ಆಗುತ್ತದೆ. ಏನೂ ಮಾಡಲಿಕ್ಕಾಗುವುದಿಲ್ಲ. ಏಕೆಂದರೆ, ಮೆಜಾರಿಟಿ ಇದೆ. ಆದರೆ, ಸರ್ಕಾರ ಎಲ್ಲಿ ತಿದ್ದಿಕೊಳ್ಳಬಹುದು? ನಿಮಗೆ ಎಲ್ಲಿ ಅವಕಾಶವಿದೆ? ನೀರೆಲ್ಲಿ ಎಡವಿದ್ದೀರಿ? ಯಾರಿಗೋಸ್ಕರ ಈ ಸಂವಿಧಾನ, ಯಾರಿಗೋಸ್ಕರ ಇರುವುದು ಬಡವರಿಗೋಸ್ಕರ, ದಲಿತರಿಗೋಸ್ಕರ, ಎಂದು ಹೇಳುವ ಜನರು ನೀವು, ಅವರ ಮಾರಣಹೋಮವಾದ ಸಂದರ್ಭದಲ್ಲೂ ಅದರ ಮೇಲೆ ನೀವು ನೃತ್ಯವಾಡುತ್ತೀರೆಂದರೆ ಹೇಗೆ? ಅದಕ್ಕೆ ಚರಮಗೀತೆಯನ್ನು ಹಾಡಬೇಕು. ಅದನ್ನು ತಿದ್ದಿಕೊಳ್ಳಬೇಕು. ಅದಕ್ಕೋಸ್ಕರ ಚರ್ಚೆಗೆ ಸಮಯ ನಿಗದಿಪಡಿಸಿ.

ಅಧ್ಯಕ್ಷರು: ಅವರ ಜೊತೆ ಸಮಾಲೋಚಿಸಿ, ನಾಳೆ ನಾಡಿದ್ದು ಯಾವಾಗ ಎಂದು ಆಮೇಲೆ ತಿಳಿಸುತ್ತೇನೆ.

(ಅ) ತರೀಕೆರೆ ತಾಲ್ಲೂಕು ಕುಂಟಮಡು ಗೋರಾಪುರದಲ್ಲಿ ಅತ್ಯಂತ ಭೀಕರ ವಾಂತಿ ಭೇದಿಯಿಂದ ನೂರಾರು ಜನ ಆಸ್ಪತ್ರೆಗೆ ದಾಖಲಾಗಿರುವ ಬಗ್ಗೆ.

ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ) : ಮಾನ್ಯ ಅಧ್ಯಕ್ಷರೆ, ನಾನು ಆರೋಗ್ಯ ಸಚಿವರ ಗಮನ ಸೆಳೆಯಬಯಸುತ್ತೇನೆ. ತರೀಕೆರೆ ತಾಲ್ಲೂಕು ಕುಂಟಮಡು ಹಾಗೂ ಗೋರಾಪುರದಲ್ಲಿ ಅತ್ಯಂತ ಭೀಕರ ವಾಂತಿ-ಭೇದಿಯಾಗುತ್ತಿದೆ. ಕುಂಟಮಡು ಗ್ರಾದಮಲ್ಲಿ 200 ಕ್ಕೂ ಹೆಚ್ಚು ಜನರು ಆಸ್ಪತ್ರೆ ಸೇರಿದ್ದಾರೆ. ಇಡೀ ಗ್ರಾಮದಲ್ಲಿ ಜನರು ಇನ್ನೂ ಚಿಕಿತ್ಸೆ ಪಡೆಯುತ್ತಿದ್ದಾರೆ. ಈಗಲೂ ಸಹ 150 ಜನರು ಒಂದು ಆಸ್ಪತ್ರೆಯಲ್ಲಿದ್ದಾರೆ. ವಿಶೇಷವಾಗಿ ಡಾಕ್ಟರ್‌ಗಳು ಚಿಕಿತ್ಸೆ ಕೊಡುತ್ತಿದ್ದಾರೆ. ಹೋದವಾರ ಗೋರಾಪುರದಲ್ಲೂ ಹಾಗೆಯೇ ಆಗಿದೆ. ಫ್ಲೋರೈಡ್ ನೀರಿನಂಶದಿಂದ ಈ ಕಾಯಿಲೆ ಬರುತ್ತಿದೆ. ನಾನು ತಮಗೂ ಸಹ ಪತ್ರ ಕೊಟ್ಟಿದ್ದೆ. ಅದರ ಬಗ್ಗೆ ಗಮನಹರಿಸಲಿಲ್ಲ. ಜಿಲ್ಲಾ ಸಚಿವರಿಗೂ ಕೊಟ್ಟಿದ್ದೇನೆ. ಅವರನ್ನು ಭೇಟಿ ಕೊಡಿಯೆಂದು ಕೇಳಿದ್ದೇ ಅವರು ಅಲ್ಲಿಗೆ ಹೋಗಿಲ್ಲ. ಆದರೂ, ಏನೂ ಮಾಡಿಲ್ಲ. ಇದನ್ನು ತಡೆಯಲು ಸರ್ಕಾರದವರು ಏನು ಕ್ರಮ ತೆಗೆದುಕೊಳ್ಳುತ್ತಾರೆ? ಇವೆಲ್ಲಾ ಬರಗಾಲದಿಂದ ಆಗುತ್ತಿದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಎಂಬ ಬಗ್ಗೆ ಇವತ್ತು ಉತ್ತರಿಸುತ್ತೀರಾ? ಅಥವಾ ನಾಳೆ ಉತ್ತರಿಸುತ್ತೀರಾ? ಎಂಬುದನ್ನು ತಿಳಿಸಬೇಕು.

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವಾರ್ತಾ ಸಚಿವರು) : ಮಾನ್ಯ ಅಧ್ಯಕ್ಷರೆ ಅದರ ಬಗ್ಗೆ ಅವರು ಕೊಟ್ಟಿರುವ ನೋಟೀಸ್ ನನಗೆ ಬಂದಿಲ್ಲ. ಅದರ ಬಗ್ಗೆ ನಾನು ನಾಳೆ ಅಥವಾ ನಾಡಿದ್ದು ಹೇಳಿಕೆಯನ್ನು ಕೊಡುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) : ಮಾನ್ಯ ಅಧ್ಯಕ್ಷರೆ, ತರೀಕೆರೆ ತಾಲ್ಲೂಕು ಕುಂಟ ಮಡುವಿನಲ್ಲಿ ಈಗಾಗಲೇ 50-100 ಜನರು ಆಸ್ಪತ್ರೆಗೆ ದಾಖಲಾಗಿದ್ದಾರೆ. ಡಾಕ್ಟರ್ ಅನ್ನು ವಿಚಾರಿಸಿದಾಗ ಕುಡಿಯುವ ನೀರಿನ ದೋಷದಿಂದಾಗಿ ಹೀಗಾಗಿದೆ ಎಂದು ತಿಳಿಸಿದರು.

ಅಧ್ಯಕ್ಷರು : ಅವರು ರೂಲ್ 351ರ ಪ್ರಕಾರ ರೈಜ್ ಮಾಡುತ್ತಿದ್ದಾರೆ. ಮಂತ್ರಿಗಳು ಉತ್ತರ ಕೊಟ್ಟರೆ ಕೊಡಬಹುದು. ಬಿಟ್ಟರೆ ಬಿಡಬಹುದು. ತೊಂದರೆ ಏನಿಲ್ಲ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಉತ್ತರ ಕೊಡದಿದ್ದರೆ ಆಗುವುದಿಲ್ಲ.

ಅಧ್ಯಕ್ಷರು : ನಾನು ನಿಯಮ 351 ರಡಿಯಲ್ಲಿ ಆಡ್ಮಿಟ್ ಮಾಡಿದ್ದೇನೆ. ತಾವು ನಿಯಮ 351 ಅನ್ನು ಓದಿ ಸರ್ಕಾರದವರು ಇಚ್ಛಿಸಿದರೆ ಉತ್ತರಿಸಬಹುದು; ಕೊಟ್ಟರೆ ನನ್ನ ಅಡ್ಡಿ ಇಲ್ಲ. ತಾವು ನಿಯಮ 351 ಅನ್ನು ಓದಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಅಂದರೆ, ಸರ್ಕಾರ ಉತ್ತರಿಸಬೇಕೆಂದರೆ, ಯಾರಾದರೂ ವಾಂತಿ -ಭೇದಿಯಿಂದ ಸತ್ತು ಹೋಗಬೇಕೆ? ಸತ್ತರೆ ಮಾತ್ರ ಉತ್ತರ ಕೊಡುವುದು ಬದುಕಿದ್ದರೆ ಉತ್ತರ ಕೊಡುವುದಿಲ್ಲವೆ?

ಅಧ್ಯಕ್ಷರು : ಏನೇನೋ ಮಾತನಾಡಬೇಡಿ. ತಾವು ನಿಯಮ 351 ಅನ್ನು ಓದಿ. ಸರ್ಕಾರ ಉತ್ತರಿಸಬಹುದು. ನಾನು ಬೇಡವೆಂದು ಹೇಳುತ್ತಿಲ್ಲ. ತಾವು ಸಡನ್ ಆಗಿ ಪ್ರಶ್ನೆ ಕೇಳಿ, ಸಡನ್ ಆಗಿ ಉತ್ತರಿಸಬೇಕೆಂದರೆ, ಹೇಗೆ? ನಾಳೆ ಅಥವಾ ನಾಡಿದ್ದು ಉತ್ತರಿಸಬಹುದು, ನೋಡೋಣ. ನೀವು ಸಬ್‌ಮಿಟ್ ಮಾಡಿ.